# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – 570 006**

**ಅಧ್ಯಯನ ಸಾಮಗ್ರಿ ವಿಭಾಗ**

ಸಂಖ್ಯೆ: ಕರಾಮುವಿ/ಅಸಾವಿ/08-76/2026-27 ದಿನಾಂಕ: 21-05-2026

## ಬಾಕ್ಸ್ ಟೆಂಡರ್ ಪ್ರಕಟಣೆ

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡುವ ಸಂಬಂಧ ಬಾಕ್ಸ್ ಟೆಂಡರ್ ಮೂಲಕ ದರಪಟ್ಟಿಯನ್ನು ಆಹ್ವಾನಿಸಿರುವ ಬಗೆಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 20-05-2026 (ಕಂಡಿಕೆ ಸಂಖ್ಯೆ: 06)

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಿಕೊಳ್ಳಬೇಕಾಗಿದ್ದು, ಅಂದಾಜು ಮೊತ್ತ **ರೂ. 5,00,000/- (ರೂಪಾಯಿ ಐದು ಲಕ್ಷ ಮಾತ್ರ)** ಗಳಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ನಿಯಮ ಮತ್ತು ಷರತ್ತುಗಳು ಈ ಕೆಳಕಂಡಂತಿವೆ:

**Specifications:**

- ಒಳಪುಟಗಳನ್ನು ಡೆಮಿ 1/4 ಅಳತೆಯಲ್ಲಿ 70 GSM 'A' Grade Maplitho White Paper ಉಪಯೋಗಿಸಿ, ಒಂದು ಬಣ್ಣದಲ್ಲಿ ಡಿಜಿಟಲ್ ಪ್ರಿಂಟಿಂಗ್ ಮಾಡಬೇಕಿರುತ್ತದೆ.
- ರಕ್ಷಾಪುಟಗಳನ್ನು 220 GSM Indian Mat Art Card (ಬಹುವರ್ಣದಲ್ಲಿ ಮುದ್ರಿಸಿ) Perfect Binding ಮಾಡಬೇಕಾಗಿರುತ್ತದೆ.

ಸದರಿ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟ್ ಮತ್ತು ಬೈಂಡಿಂಗ್ ಮಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಖರ್ಚಿನಲ್ಲಿ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆಗಳೊಂದಿಗೆ) ನಮೂದಿಸಿ 'ದರಪಟ್ಟಿ' ಸಲ್ಲಿಸಲು ಸೂಚಿಸಲಾಗಿದೆ.

ಮೇಲೆ ತಿಳಿಸಿರುವ Specification ಗೆ ಅನುಗುಣವಾಗಿ **21** ವಿವಿಧ ಶಿಕ್ಷಣಕ್ರಮಗಳು ಸೇರಿದಂತೆ ಅಂದಾಜು ಒಟ್ಟಾರೆ **23,674** ಪುಟಗಳನ್ನು ಒಳಗೊಂಡಂತೆ **1,470** ಪುಸ್ತಕಗಳನ್ನು ಡಿಜಿಟಲ್ ಪ್ರಿಂಟ್ ಹಾಗೂ ಬೈಂಡಿಂಗ್‌ನೊಂದಿಗೆ (ಪುಸ್ತಕದ ರೂಪದಲ್ಲಿ) ಸಿದ್ಧಪಡಿಸಿ ಸರಬರಾಜು ಮಾಡಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ವಿಷಯ | ಒಂದು ಪುಟಕ್ಕೆ ತಗಲುವ ದರ ರೂ. ಗಳಲ್ಲಿ (ಎಲ್ಲಾ ತೆರಿಗೆಗಳೂ ಒಳಗೊಂಡಂತೆ) |
|---|---|---|
| 1 | ಒಳಪುಟಗಳ ಡಿಜಿಟಲ್ ಪ್ರಿಂಟಿಂಗ್ (ಒಂದು ಬಣ್ಣದಲ್ಲಿ) ಮುದ್ರಿಸಲು ಒಂದು ಪುಟಕ್ಕೆ ತಗಲುವ ದರ. | |
| 2 | ನಾಲ್ಕು (04) ಪುಟಗಳ ಒಂದು ರಕ್ಷಾ ಪುಟಕ್ಕೆ ಬಹುವರ್ಣದಲ್ಲಿ ಮುದ್ರಿಸಲು ಮತ್ತು ಬೈಂಡಿಂಗ್ ಮಾಡಲು ತಗಲುವ ದರ. | |

ಮೇಲ್ಕಂಡ ಮಾದರಿಯಲ್ಲಿ ತಮ್ಮ ಸಂಸ್ಥೆಯ ಮುಖಪತ್ರ (ಲೆಟರ್‌ಹೆಡ್)ದಲ್ಲಿ ದರವನ್ನು ನಮೂದಿಸಿ (ಎಲ್ಲಾ ತೆರಿಗೆಗಳೂ ಒಳಗೊಂಡಂತೆ), ಮೊಹರು ಮಾಡಿದ ಲಕೋಟೆಯ ಮೇಲೆ **"ಅಧ್ಯಯನ ಸಾಮಗ್ರಿಗಳ ಡಿಜಿಟಲ್ ಪ್ರಿಂಟಿಂಗ್ ಮತ್ತು ಬೈಂಡಿಂಗ್ ಮಾಡುವ ಸಂಬಂಧದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಕಡ್ಡಾಯವಾಗಿ ಬರೆದು, ದಿನಾಂಕ: 01-06-26 ರ ಸಂಜೆ 5.00 ಗಂಟೆಯ ಒಳಗಾಗಿ ಕುಲಸಚಿವರ ಕಚೇರಿಯಲ್ಲಿ ಇಡಲಾಗಿರುವ ಬಾಕ್ಸ್‌ನಲ್ಲಿ ಹಾಕುವುದು.

**ದರಪಟ್ಟಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದ್ದು, ತಪ್ಪಿದ್ದಲ್ಲಿ, ಅಂತಹ ದರಪಟ್ಟಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು.**

1. ಟೆಂಡರ್‌ನ ಒಟ್ಟಾರೆ ಮೊತ್ತಕ್ಕೆ ಶೇಕಡ 2.5 ರ ಇ.ಎಂ.ಡಿ. ಮೊತ್ತ ರೂ. 12,500/- ಗಳ ಡಿ.ಡಿ. ಯನ್ನು "ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006" ಇವರ ಹೆಸರಿನಲ್ಲಿ ಸಲ್ಲಿಸುವುದು.
2. ಜಿ.ಎಸ್.ಟಿ. ನೋಂದಣಿದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸಲು ಅರ್ಹರಾಗಿದ್ದು, ದರಪಟ್ಟಿಯೊಂದಿಗೆ ನೆರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು.
3. ಪಾನ್ ಕಾರ್ಡ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ನಿಯಮ ಮತ್ತು ಷರತ್ತುಗಳು:

1. ಮುದ್ರಣಕ್ಕೆ ಸಂಬಂಧಿಸಿದಂತೆ ಅಧ್ಯಯನ ಸಾಮಗ್ರಿಗಳ ಕರಡು (ಡೆಮಿ) ಮತ್ತು ಸಾಫ್ಟ್ ಕಾಪಿಯನ್ನು ವಿಶ್ವವಿದ್ಯಾನಿಲಯವೇ ಕಾರ್ಯಾದೇಶದೊಂದಿಗೆ ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಡಿಜಿಟಲ್ ಪ್ರಿಂಟಿಂಗ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಬೇಕಾಗಿರುತ್ತದೆ (ಅಂತಿಮ ಮುದ್ರಣಕ್ಕೆ ಮುಂಚೆ ತಲಾ ಒಂದು ಪ್ರತಿಯ ಡೆಮಿಯನ್ನು ನೀಡಿ ಸಂಬಂಧಪಟ್ಟ ವಿಭಾಗದಿಂದ ಅನುಮೋದನೆ ಪಡೆದು ನಂತರ ಮುದ್ರಣಕ್ಕೆ ಕ್ರಮವಹಿಸುವುದು ಕಡ್ಡಾಯವಾಗಿರುತ್ತದೆ).
2. ಮುದ್ರಣಕ್ಕೆ ಕನಿಷ್ಠ ದರವನ್ನು ನಮೂದಿಸುವ ಸಂಸ್ಥೆಯವರನ್ನು ಎಲ್–1 ಬಿಡ್‌ದಾರರೆಂದು ಪರಿಗಣಿಸಲಾಗುವುದು.
3. ಎಲ್–1 ದರವು 'ಕಾರ್ಯಾದೇಶ' ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೂ ಚಾಲ್ತಿಯಲ್ಲಿರುತ್ತದೆ. ಈ ಸಂಬಂಧ ಎಲ್–1 ಬಿಡ್‌ದಾರರು ವಿಶ್ವವಿದ್ಯಾನಿಲಯದೊಂದಿಗೆ ಒಂದು ವರ್ಷದವರೆಗೆ 'ದರ ಕರಾರು ಒಪ್ಪಂದ'ವನ್ನು ಮಾಡಿಕೊಳ್ಳಬೇಕಾಗುತ್ತದೆ. ಅದರಂತೆ ಬೇಡಿಕೆಯನುಸಾರ ಎಲ್–1 ದರದಲ್ಲಿ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟಿಂಗ್ ಹಾಗೂ ಬೈಂಡಿಂಗ್ ಮಾಡಿ ಸರಬರಾಜು ಮಾಡಬೇಕಾಗುತ್ತದೆ.
4. ಟೆಂಡರ್ ಆಹ್ವಾನಿತ ಶಿಕ್ಷಣಕ್ರಮಗಳಲ್ಲಿ ಒಳಪುಟಗಳ ಸಂಖ್ಯೆ ಹೆಚ್ಚಿರುವುದರಿಂದ ಒಳಪುಟಗಳಿಗೆ ಬರುವ ಕನಿಷ್ಠ ದರಗಳನ್ನು ಪರಿಗಣಿಸಲಾಗುವುದು.
5. ಟೆಂಡರ್‌ನಲ್ಲಿ ಸಲ್ಲಿಕೆಯಾಗುವ ದರಪಟ್ಟಿಗಳಲ್ಲಿ ಎರಡು ಸಂಸ್ಥೆಗಳು ಒಂದೇ ದರಗಳನ್ನು ನಮೂದಿಸಿದ್ದಲ್ಲಿ, ಸದರಿ ಸಂಸ್ಥೆಗಳ ಹಣಕಾಸು ವಹಿವಾಟುಗಳನ್ನು ಪರಿಶೀಲಿಸಿ ಕ್ರಮವಹಿಸಲಾಗುತ್ತದೆ.
6. ಎಲ್–1 ಬಿಡ್‌ದಾರರು ದರ ಕರಾರು ಒಪ್ಪಂದದ ಸಮಯದಲ್ಲಿ ಟೆಂಡರ್‌ನ ಒಟ್ಟಾರೆ ಮೌಲ್ಯಕ್ಕೆ ಭದ್ರತಾ ಠೇವಣಿಯಾಗಿ (Security Deposit) ಶೇಕಡ 5ರ ಮೊತ್ತದ ಡಿ.ಡಿ. ಯನ್ನು "ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006" ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.
7. ಯಾವುದೇ ಕಾರಣ ನೀಡದೇ 'ದರಪಟ್ಟಿ'ಯನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ.
8. ದರಪಟ್ಟಿಗೆ ಸಂಬಂಧಿಸಿದಂತೆ ಯಾವುದಾದರೂ ತಕರಾರು ಉದ್ಭವಿಸಿದರೆ, ವ್ಯಾಜ್ಯವು ಮೈಸೂರು ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಟ್ಟಿರುತ್ತದೆ.

ಆದೇಶದ ಮೇರೆಗೆ,

**ಕುಲಸಚಿವ**

ಪ್ರತಿ:

1. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಶಾಖೆ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
4. ಡಾ. ನವೀನ್‌ಕುಮಾರ್ ಸಿ.ಜಿ. ನೋಡೆಲ್ ಅಧಿಕಾರಿ, ವೆಬ್‌ಸೈಟ್, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು – **ಸದರಿ ಪ್ರಕಟಣೆಯನ್ನು ವಿ.ವಿ. ನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.**
5. ಕಚೇರಿ ಪ್ರತಿ.